ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Wednesday, the 26th March 1980/Chaithra 6, 1902 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI. P. VENKATARAMANA) in the Chair.]

OBITUARY REFERENCE

MR. SPEAKER.—I regret to make a reference to the demise of Sri S. Kariyappa, a former member of this House on 20th March 1980. Sri S. Kariyappa had served as a Member of Representative Assembly and was a Member of the Legislative Assembly from 1952 to 1967 and from 1972-1977.

Sri Kariyappa rendered service in different fields. His contribution in the field of Education is notable.

I request the Hon. Members to join me in expressing the sense of sorrow of this House to the departed soul.

The members may stand in silence for a minute as a mark of respect.

(*All Members stood in silence for one minute*)

STARRED QUESTIONS
(to which Oral answers were given)

Export of granite to Foreign Countries

9. SRI K.H. HANUME GOWDA (Hassan).—Will the Chief Minister be pleased to state :—

(a) the number of persons who have been granted licences by the Department of Mines and Geology, during the last 3 years to export special quality granite stones of different colours together with thin quantity to foreign countries :

(b) the quantity of stones exported by these persons from the last three years ;

(c) the amount of royalties received by the State in each year on account of this business for the last three years;

(d) whether it has come to the notice of the Government that if permissions are given like this to export stones there will be no special quality of granite stones left to meet the requirements of the State ?

SRI R. GUNDU RAO (Chief Minister).—

(a) The particulars of licences given from the last three years are given in the statement which is laid on the table.

(b) The quantity of stones exported during the last three years :—

Year	*Quantity (in tons)*	*Exported (Amount)*
1976	7143	32,13,000
1977	10152	44,67,500
1978	48314	2,17,41,750

(c) The details of the amounts of royalties received by the State on account of the above business :

1976	Rs. 71,430
1977	1,01,520
1978	4,83,140

(d) If the quantity of stone exported is compared with the quantity of stone that is with the State it is very negligible. If granite stones are required they can be supplied in large quantity. The present the export of stones does not affect the requirement of the State.

ಶ್ರೀ ಕೆ. ಎಚ್. ಹನುಮೇಗೌಡ.—ಎರಡು ವರ್ಷಗಳ ಹಿಂದೆ ಮದ್ರಾಸ್ ರಾಜ್ಯದಲ್ಲಿ ಈ ಬಣ್ಣದ ಗ್ರಾನೈಟ್ ಕಲ್ಲುಗಳನ್ನು ರಫ್ತು ಮಾಡುವುದಕ್ಕೆ ಯಾರುಯಾರಿಗೆ ಲೈಸೆನ್ಸ್ ಕೊಟ್ಟಿದ್ದರೋ ಅದನ್ನು ತೆಗೆದುಹಾಕಿದ್ದರಿಂದ ಅವರೆಲ್ಲಾ ನಮ್ಮ ರಾಜ್ಯಕ್ಕೆ ಬಂದು, ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಬಣ್ಣದ ಕಲ್ಲುಗಳು ಸಿಗುತ್ತವೆಯೋ ಅವುಗಳನ್ನೆಲ್ಲಾ ಹೊರದೇಶಕ್ಕೆ ರಫ್ತು ಮಾಡಲು ಅವರೇ ಎಲ್ಲಾ ಕಂಟ್ರ್ಯಾಕ್ಟನ್ನು ಪಡೆದು ಕೂಂಡಿದ್ದಾರೆಂಬುದು ಗೊತ್ತಾಗಿದೆ ಆದುದರಿಂದ ಮದ್ರಾಸ್ ರಾಜ್ಯದವರು ಮತ್ತು ಪಕ್ಕದ ಆಂಧ್ರ ಪ್ರದೇಶದವರು ಎಷ್ಟೆಷ್ಟು ಜನ ಈ ರೀತಿ ಕಂಟ್ರ್ಯಾಕ್ಟ್ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು ಸ್ವಾಮಿ.

ಶ್ರೀ ಆರ್. ಗುಂಡೂರಾವ್.—ಲೈಸೆನ್ಸನ್ನು ಯಾರುಯಾರಿಗೆ ಕೊಟ್ಟಿದ್ದೇವೆ ಎನ್ನುವ ಬಗ್ಗೆ ತಮಗೆಲ್ಲಾ ಈಗಾಗಲೇ ಅವರ ಹೆಸರುಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ಇರುವ ಹಾಗೆ ನೋಡಿದರೆ ಅದರಲ್ಲಿ ಆಂಧ್ರಪ್ರದೇಶದವರೂ, ಗೋವಾದವರೂ ಮತ್ತು ಮದ್ರಾಸ್ ರಾಜ್ಯದವರು ಇದ್ದಾರೆ ಈ ರೀತಿ ಬೇರೆ ಬೇರೆ ಭಾಗಗಳಿಂದ ಬಂದಿರತಕ್ಕ ಕಂಟ್ರ್ಯಾಕ್ಟರ್‌ಗಳಿದ್ದಾರೆ.

ಶ್ರೀ ಕೆ.ಎಚ್. ಹನುಮೇಗೌಡ.—ಮದ್ರಾಸ್ ರಾಜ್ಯದಲ್ಲಿ ಇದೇ ರೀತಿ ಗ್ರಾನೈಟ್ ಕಲ್ಲುಗಳನ್ನು ರಫ್ತು ಮಾಡುತ್ತಿದ್ದರೆ ಆದರಿಂದ ರಾಜ್ಯದ ಆವಶ್ಯಕತೆಗೆ ಮುಂದೆ ಕುಂದುಕ ಬರುತ್ತದೆ ಎನ್ನುವ ಉದ್ದೇಶದಿಂದ ಲೈಸೆನ್ಸ್ ಕೊಟ್ಟಿದ್ದನ್ನು ಕ್ಯಾನ್ಸಲ್ ಮಾಡಿದ್ದಾರೆ. ಅದೇ ನೀತಿಯನ್ನು ತಾವು ಸಹ ಇಲ್ಲಿ ಏತಕ್ಕೆ ತೆಗೆದುಕೊಳ್ಳಬಾರದು ?

ಶ್ರೀ ಆರ್. ಗುಂಡೂರಾವ್.—ತಮಿಳುನಾಡಿನವರು 'ಏತಕ್ಕೆ ಆ ರೀತಿ ಮಾಡಿದ್ದಾರೆ ಎನ್ನುವ ಕಾರಣ ನನಗೆ ಗೊತ್ತಿಲ್ಲ. ಹಿಂದಿನ ಸರ್ಕಾರ ಲೈಸೆನ್ಸ್ ಕೊಟ್ಟಿದ್ದಾರೆ, ಅವರು ರಫ್ತು ಮಾಡುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ನಮ್ಮ ರಾಜ್ಯದಲ್ಲಿ ಎಷ್ಟು ಟನ್ ಗ್ರಾನೈಟ್ ಕಲ್ಲು ಲಭ್ಯವಿದೆ ಎನ್ನುವ ಬಗ್ಗೆ ಏನಾದರೂ ಸರ್ವೆ ಮಾಡಿಸಿದ್ದೀರಾ ? ನನಗೆ ಈಗ ತಿಳಿದು ಬಂದಿರುವ ಪ್ರಕಾರ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಈ ರೀತಿಯ ಬಣ್ಣದ ಕಲ್ಲುಗಳಿವೆಯೋ ಅಲ್ಲಿಗೆಲ್ಲಾ ಲೈಸೆನ್ಸ್ ಕೊಟ್ಟ ಹಾಗೆ ಇದೆ. ಹಾಗೆ ಕೊಡದಿದ್ದರೆ ಇನ್ನು ಯಾವ ಭಾಗದಲ್ಲಿ ಉಳಿದಿದೆ ? ನಮ್ಮ ರಾಜ್ಯದ ಆವಶ್ಯಕತೆಗೆ ಕುಂದು ಬರುವುದಿಲ್ಲವೆಂದು ಹೇಳಿದ್ದೀರಿ, ಆದುದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಎಷ್ಟು ಪ್ರಮಾಣದಲ್ಲಿ ಇದು ಲಭ್ಯವಿದೆ ಮತ್ತು ಎಷ್ಟು ಭಾಗದಲ್ಲಿ ಈ ಕಲ್ಲುಗಳನ್ನು ರಫ್ತು ಮಾಡಲು ಲೈಸೆನ್ಸ್ ಕೊಟ್ಟಿದ್ದೀರಿ ಸ್ವಾಮಿ ?

ಶ್ರೀ ಆರ್. ಗುಂಡೂರಾವ್.—ಅದರ ಬಗ್ಗೆ ಸರ್ವೆ ಮಾಡಿಲ್ಲ ಆದರೆ ಈಗಿನ ಅಂದಾಜು ಪ್ರಕಾರ ರಫ್ತು ಮಾಡುತ್ತಿರುವುದು ಬಹಳ ಕಡಿಮೆ, ಆ ದೃಷ್ಟಿಯಿಂದ ಕಡಿಮೆಯಾಗುವುದಿಲ್ಲ ಎನ್ನುವುದು ಮೊದಲನೆಯದು, ಎರಡನೆಯದಾಗಿ ಇದೇ ರೀತಿಯ ಬೇಡಿಕೆ ವಿದೇಶಗಳಲ್ಲಿ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ, ಕೆಲವು ಸಂದರ್ಭದಲ್ಲಿ ಇವು ಬಹಳ ಚೆನ್ನಾಗಿ ಕಂಡುಬಂದಿರಬಹುದು, ಇದೇ ಕಲ್ಲುಗಳಿಗೆ ೨೦ ವರ್ಷಗಳ ಹಿಂದೆ ಯಾರೂ ಕೇಳುವವರೇ ಇರಲಿಲ್ಲ, ನಾಳೆ ದಿವಸ ಇದಕ್ಕಿಂತ ಉತ್ತಮವಾದ ಕಲ್ಲು ಲಭ್ಯವಾದಾಗ ಇದಕ್ಕೆ ಬೇಡಿಕೆ ಕಡಿಮೆಯಾಗಬಹುದು. ಆದುದರಿಂದ ಇವತ್ತು ನಾವು ಏನು ರಫ್ತು ಮಾಡುತ್ತಿದ್ದೇವೆ ಅದು ಅತ್ಯಂತ ಕಡಿಮೆ ಪಟ್ಟದಲ್ಲಿದೆ. ಮತ್ತೆ ಎಷ್ಟು ಸಿಗಬಹುದೆಂದು ಕೇಳಿದೀರಿ ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ಕಳೆದ ೧೯೭೮-೭೯ರ ಸಾಲಿನಲ್ಲಿ ಸುಮಾರು ೨ ಕೋಟಿ ೧೭ ಲಕ್ಷ ಕಲ್ಲುಗಳನ್ನು ರಫ್ತು ಮಾಡಲಾಗಿದೆ ಎಂದು ಹೇಳಿದ್ದೀರಿ, ಆದರೆ ಆದರಿಂದ ಬಂದಿರತಕ್ಕ ರಾಯಲ್ಟಿ ೪ ಲಕ್ಷದ ೮೩ ಸಾವಿರ ಅಂತ ಹೇಳಿದ್ದೀರಿ. ಕೋಟ್ಯಾಂತರ ರೂಪಾಯಿಗಳು ರಫ್ತು ಆಗುತ್ತಿರುವಾಗ ರಾಯಲ್ಟಿಯನ್ನು ಸರ್ಕಾರ ಫಿಕ್ಸ್ ಮಾಡಿರುವುದು ಅತ್ಯಂತ ಕಡಿಮೆ ಯಾಗಿಲ್ಲವೇ ?

ಶ್ರೀ ಆರ್. ಗುಂಡೂರಾವ್ —ಕಡಿಮೆ ಇದೆ, ಹಿಂದೆಯೇ ಇದನ್ನು ಕಡಿಮೆ ಫಿಕ್ಸ್ ಮಾಡಿದ್ದಾರೆ, ಆದನ್ನು ಜಾಸ್ತಿ ಮಾಡಬೇಕು ಅಂತ ತಮ್ಮ ಸಲಹೆ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಎರಡನೆಯದಾಗಿ, ತಾವು ಕೇಳಿದಿರಿ ನಮ್ಮಲ್ಲಿ ಎಷ್ಟು ಟನ್ ಈ ಗ್ರಾನೈಟ್ ಕಲ್ಲು ಸಿಗಬಹುದೆಂದು, ಅದಕ್ಕೆ ಸುಮಾರು ೧.೫ ಮಿಲಿಯನ್ ಟನ್ ಮೇಲ್ಪಟ್ಟು ಸಿಗುತ್ತದೆ ಎನ್ನುವ ಅಂದಾಜು ಮಾಡಿದ್ದಾರೆ. ಪೂರ್ತಿ ಸರ್ವೆ ಮಾಡಿಲ್ಲ, ಈಗ ಹಾಲಿ ಸರ್ವೆ ಮಾಡಿರುವ ಪ್ರಕಾರ ಇಷ್ಟು ಸಿಗುತ್ತದೆ. ಆದುದರಿಂದ ಈಗ ನಾವು ಏನು ರಫ್ತು ಮಾಡುತ್ತಿದ್ದೇವೆ ಅದು ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದರಿಂದ ನಮ್ಮ ರಾಜ್ಯಕ್ಕೆ ಏನೂ ತೊಂದರೆಯಾಗಲಾರದೆಂದು ಭಾವಿಸುತ್ತೇನೆ.

SRI D. DEVARAJ URS.—Has it come to the notice of the Hon. Cnief Minister that the Goverument have passed orders to hand over all the granite quarries to the Mysore Minerals Corporation ?

SRI R. GUNDU RAO.— The Government has not yet taken any decision in this respect.

SRI D. DEVARAJ URS—Has it also come to the notice of the Chief Minister that the Department of Mines and Geology was independetly dealing with the matter of issuing licences ? It came to the notice of the previous Government that the licences were being issued by the Director of Mines and Geology because powers were given to him Subsequently, the Government took notice of the situation as as just now described by the hon. Member Sri Hanume Gowda, and the previous Government took a decision to hand over all the granite quarries in the forest areas to the Mysore Minerals Corporation. Whether the Hon. Chief Minister is aware of these things?

SRI R. GUNDU RAO.—The Government is thinking that it should be handed over to the Mysore Minerals Corporation. Still a final decision is to be taken.

ಶ್ರೀ ಗಂಗಣ್ಣ ಭೀವಂಪ್ಪ —ನನ್ನ ಕ್ಷೇತ್ರದಲ್ಲಿ ಬಹಳ ಗ್ರಾನೈಟ್ ಕಲ್ಲು ಸಿಗುತ್ತದೆ. ಮತ್ತು ಅದು ಮದರಾಸಿಗೆ ಹೋಗುತ್ತಿದೆ. ಅಲ್ಲಿಂದ ವಿದೇಶಗಳಿಗೆ ಹೋಗುತ್ತದೆ. ಹೀಗೆ ವಿದೇಶಗಳಿಗೆ ಕಳುಹಿಸುವ ಬದಲು, ಅಲ್ಲಿ ಯಾವ ರೀತಿ ಅದನ್ನು ಫಿನಿಷ್ ಮಾಡುತ್ತಾರೋ ಅಂಥ ಒಂದು ಸಲಕರಣೆಯನ್ನು, ಯಂತ್ರೋಪಕರಣವನ್ನು ನಮ್ಮ ಸರ್ಕಾರದವರು ಇಲ್ಲೇ ಜೋಡಿಸಿ ಕೆಲಸವನ್ನು ಏಕೆ ಮಾಡಬಾರದು ? ಅಥವಾ ಮಾಡುವವರಿಗಾದರೂ ಏಕೆ ಧನ ಸಹಾಯವನ್ನು ನೀಡಬಾರದು ?

ಶ್ರೀ ಆರ್. ಗುಂಡೂರಾವ್.—ಅದು ಅವರ ಸಲಹೆ ನೋಡೋಣ.

Overflowing of water on the Ulvi-Kumbarawada Road in Supa Taluk

63. SRI D. V. WAINGANKAR(Karwar).—Will the Chief Minister be pleased to state.—

(a) whether it is a fact that serious inconvenience is caused during the rainy season on account of overflowing of water on the causeway at Ulvi on the Ulvi-Kumbarawada road in Supa Taluk ;

(b) if so, whether it is a fact that it has been represented during the last so many years that cause way may be raised ;

(c) if so, the action taken to raise the causeway ?

SRI R. GUNDU RAO(Chief Minister).—

(a) Yes. Traffic is interrupted during rainy season for a period of about three months.

(b) Yes.

(c) The Mysore Power Corporation has informed that the causeway and portion of Ulvi-Kumbarawada road comes under the submersion of proposed lower Kaneri Dam. Hence, the raising of the causeway may not serve the traffic. However, a bridge on the Patoli-Anshi Road is being constructed to cross the river during the rainy season.